**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 91/2020**

**ಚಾ.ಸಾಃ3, ಫ್ರಾ.ಸಾಃ01**

| | |
|---|---|
| ಸಾಕ್ಷಿದಾರನ ಹೆಸರು | ಮಾರುತಿ ನಾಯ್ಕ |
| ತಂದೆಯ ಹೆಸರು | ನಾರಾಯಣ ನಾಯ್ಕ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ನಿರ್ವಾಹಕ, ಕೆ.ಎಸ್.ಆರ್.ಟಿ. ಕುಮಟಾ ಡಿಪೋ |
| ವಾಸ್ತವ್ಯ | ಕೆಕ್ಕಾರ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 17-03-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ಗುನ್ನೆ ಜಾಗೆಯ ಪಂಚನಾಮೆ ಮತ್ತು ಒಂದು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ತನ್ನದು ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ಕ್ರಮವಾಗಿ ನಿಪಿ-1 ಮತ್ತು 2 ಹಾಗೂ ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಗಳನ್ನು ದಿನಾಂಕ 30-05-2019 ರಂದು ಕಡತೋಕಾದ ಜಡ್ಡಿಗದ್ದೆ ಕ್ರಾಸ್ ಹತ್ತಿರ ಇರುವ ಚಾಸಾ-1 ಕುಸುಮಾರವರ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿಸಿದಂತೆ ಪೋಲಿಸರು ಪಂಚನಾಮೆ ಜರುಗಿಸಿದಾಗ ಮಾಡಿರುತ್ತೇನೆ. ಚಾಸಾ-1 ರವರು ಕಳ್ಳತನ ಆಗಿದ್ದ ಬಗ್ಗೆ ಗ್ರಿಲ್ಸ್ ಓಪನ್ ಆಗಿದ್ದ ಬಗ್ಗೆ ಮತ್ತು ಗೋಡ್ರೇಜ್ ಕಪಾಟು ತೆರೆದಿದ್ದ ಬಗ್ಗೆ ತೋರಿಸಿರುತ್ತಾರೆ. ಆ ಸಂದರ್ಭದಲ್ಲಿ ನಾನು, ಚಾಸಾ-1 ಮತ್ತು ಪೋಲಿಸರು ಹಾಜರಿದ್ದರು. ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಸ್ಥಳಕ್ಕೆ ಶ್ವಾನದಳ ಬಂದಿತ್ತು. ಪೋಲಿಸರು ನಮ್ಮನ್ನು ನಿಲ್ಲಿಸಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 2 ಛಾಯಾಚಿತ್ರಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೃಷ್ಣ ವಿ. ನಾಯ್ಕರಿಂದಃ**

ನಾನು ಸದರಿ ದಿನದಂದು ರಜೆಯ ಮೇಲೆ ಇದ್ದೆ. ನಮ್ಮ ಮನೆಯು ಗುನ್ನಾ ಜಾಗದಿಂದ ಸುಮಾರು 4-5 ಕಿಲೋಮೀಟರ್ ದೂರದಲ್ಲಿರುತ್ತದೆ. ಗುನ್ನಾ ಮನೆಯ ಸುತ್ತಮುತ್ತ ಹಲವಾರು ಮನೆಗಳಿವೆ ಎಂದರೆ ಸರಿ. ಚಾಸಾ-1 ಕುಸುಮಾ ನನ್ನ ಹೆಂಡತಿಯ ಅಕ್ಕ. ಗುನ್ನಾ ಜಾಗಕ್ಕೆ ಪೋಲಿಸರು ಬಂದ ನಂತರ ನಾನು ಹೋಗಿರುತ್ತೇನೆ. ಪೋಲಿಸರು ಎರಡು ಜೀಪಿನಲ್ಲಿ ಬಂದಿದ್ದರು. ಎಷ್ಟು ಜನ ಪೋಲಿಸರು ಬಂದಿದ್ದರು ಎನ್ನುವುದನ್ನು ಹೇಳಲಾಗುವುದಿಲ್ಲ. ಪಂಚನಾಮೆಯನ್ನು ಪೋಲಿಸರು

ಬರೆದಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಪೋಲಿಸರು ಬರೆದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಅದರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಚಾಸಾ-1 ರವರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕ್ಕೆ ನಾನು ಹೊನ್ನಾವರದ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಪಂಚನಾಮೆಗೆ ಎಂದು ಹೇಳಿ ನನ್ನ ಸಹಿ ಪಡೆದಿರುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**